# HAVYAKA SANDESHA

ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

॥धर्मो रक्षति रक्षितः॥

Vol. XXII No. 7 November 2014 Pages 12 **Rs. 2/-**




**Smt. Jyoti & Shri Dilip Bhat Family Donated Rs. 1,00,000/- to H.W.T. Medical Fund**



**Smt. Usha & Shri Vishnu Shastri Donated Rs. 1,00,000/- to H.W.T. Medical Fund**

*PAGE DONATED BY : **M/S. METALLURGICAL SERVICES,** COURTESY : **SHRI RAMESH G. HEGDE,** MADAPPAN, KARKI, DADAR T. T. (Dec. 2013)*

**"Havyaka Sandesha"** is a monthly publication by **HAVYAKA WELFARE TRUST, Mumbai** B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆2665 2591

***Hon. Editor*** : Smt. Amita S. Bhagwat

***Editorial Committee*** { R. N. Kameshwar
R. M. Shastri
Smt. Shashikala Hegde
Smt. Tanuja Hegde

***Publisher*** : Narayan Akadas R.
Hon. Gen. Secretary

***Printed at*** : M/s. Navin Printers
Mumbai - 400 016.
✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, benefactor (BN) Rs.3010/-, Sustaining Life Member (SL) Rs. 2010/-, Life Member (LM) 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2013-2014**

| | | |
|---|---|---|
| ***President*** | : | N. R. Hegde, Dombivli |
| ***Vice - President*** | : | Shivkumar P. Bhagwat |
| ***Hon. Gen. Secretary*** | : | Narayan Akadas |
| ***Hon. Jt. Secretary*** | : | R. M. Shastri, Dombivli |
| ***Hon. Treasurer*** | : | A. G. Bhat |

***Elected Members :***

| | |
|---|---|
| Smt. Tanuja Hegde | Suresh Hegde |
| Smt. Shashikala Hegde | R.N.Kameshwar |
| A. K. Bhat | Smt. Uma Swamy |
| Keshav Hegde | Sanjay Bhat |
| Ramesh Vaidya | |

***EDITORIAL***

# WEARING SMILE

Throughout the country, whether North or South, East or West Deepavali is celebrated with equal jest. Though we are all aware of the story of the Bali Chakravarti coming back to earth to be worshipped, the main theme of the festival appears to be celebration. We celebrate by lighting the lamps, feasting, distributing the sweets and meeting people. However the most beautiful definition of the Festival was given by my mother when I was a kid that we are not supposed to cry during festival. After all the true spirit of the Festival is to be happy and that is why we all try to forget our worries and disappointments during festive seasons. Most of the time we succeed in doing so.

This Festive season will soon come to an end but it does not mean that we should cease to be happy and enthusiastic. What does it take to be happy? If we have good health, shelter, means to have meals and clothing and if we are surrounded by the loved ones we have all reasons to be happy. However most of our time is spent in thinking about what we don't have. And somewhere in the journey of life we tend to learn the art of glorifying our disappointments, failures or sufferings. In doing so we forget to value what we have.

We presume that we don't have enough to be happy and we opt to pursue our dreams. Thinking big and pursuing dreams are often considered as virtues. However, in doing so it is equally important to take due care of our health. We may not have the luxury of watching sunrise or sunset but is it not necessary to take out some time for morning or evening walks? Sadly many of us think, that is meant for retired people.

Obesity has become a major concern not only for adults but also for children. In olden days it was only in festive seasons that one would indulge in sweets and fried food. Now, there is junk food available at every corner. Not only are the delicacies of different states but also international cuisines tempting us. We want some lame reason to party out. There are advertisements on TV channels that eating chocolates make not only for the special occasion but also we have to give chocolates to someone if they are special. Giving gifts is depicted as the way of expressing love. We are caught in such an artificial world that we are forgetting simple ways of being happy.

Happiness is not temporary satisfaction of our senses but it is a feeling that we have to carry throughout our lives. For experiencing happiness, we have to adopt healthy lifestyle. Investing in our health and relations is more important than investing in gold bonds and real estates. After all 'smile' is the best attire we can wear all through our lives.

ಅಮಿತಾ ಎಸ್ ಭಾಗವತ್

e-mail : amitabhagwat@gmail.com

*PAGE DONATED BY : **ADVOCATE M. S. PANDIT** PUNE*

# PRESIDENT'S MESSAGE

My Dear Friends,

September 28th was a HISTORICAL DAY for HAVYAKA WELFARE TRUST as on that day we had Durga Pooja and AGM at our own premises at Ghatkopar. We registered the sale deed on 26th September 2014. After performing the Panch Gavya Homa, it was an emotional moment to see that all our members who were present, entered the Hall by putting right foot first. Our Golden Jubilee celebrations came to an end by performing the Durga Pooja in our own premises. During Pooja, as usual, Kunkumarchana was performed by all ladies present.

Friends, owning a hall has increased our responsibilities. We need to do the interiors and run the hall efficiently so that we get sizable amount as income to run the welfare activities. We have contacted a few interested parties for running the hall. However, we need to contact some more parties for the same. If any of the members know any such party who would be interested in running the hall, please request them to contact us.

On the same day i.e. on 28th September 2014 we had our Annual General Body Meeting in our hall. (immediately after Durga Pooja and lunch). In the beginning of the meeting the members congratulated Mr. Sanjay Bhat and his team for the grand success of all the functions of Golden Jubilee Year and especially the Grand Finale held on 14th September at Ravindra Natya Mandir. The discussion was mainly focused on running the hall and forming guidelines to utilize the Medical Fund collected during the Golden Jubilee celebration. However after the discussion the members authorized the managing committee to take appropriate decision. Mr. S.P.Bhat who was appointed as Returning Officer announced the name of the New Managing Committee members. The six members for the period of 2014-15 & 2015-16 were elected unanimously. We are happy to welcome Shri. Keshav Hegde and Shri. Suresh Hegde to the managing committee as elected members.

We had our first managing committee meeting with newly elected members on 12th October 2014 and decided to have same office bearers except that Shri. Ram Kameshwar is the convener for Marriage Bureau and Smt. Shashikala Hegde is the convener for Women wing.

We plan to have Women meet on 21st December, 2014 in our own hall. Details will soon be available in our mouth piece SANDESHA.

Please attend in large number for the Women Meet.

With Warm Regards
**N. R. HEGDE**
*President*

## FORTHCOMING EVENT

# WOMEN'S GET TO GETHER

***on 21st December 2014***

***at Havyakara Sabhagraha, Deepti Solitaire, Ghatkopar (W)***

*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2013)*

# ಗಂಡ-ಹೆಂಡತಿಯರು ಹೇಗಿರಬೇಕು!- ಒಂದು ಹರಟೆ

✍ ಚ. ಮೂ. ಗಂಗಾಧರ ಶಾಸ್ತ್ರಿ

ವಿವಾಹಸಂಸ್ಕಾರದ ಕನ್ಯಾಸಮರ್ಪಣೆಯೆಂಬ ಭಾಗದಲ್ಲಿ, ಕನ್ನಿಕೆಯ ತಂದೆಯು ಮಗಳಿಗೆ 'ಕಾರ್ಯೇಷು ದಾಸೀ, ಕರಣೇಷು ಮಂತ್ರೀ, ಭೋಜ್ಯೇಷು ಮಾತಾ, ಕ್ಷಮಯಾ ಧರಿತ್ರಿ, ಶಯನೇಷು ವೇಶ್ಯಾ' ಅಂದರೆ, ಕಾರ್ಯದಲ್ಲಿ ದಾಸಿಯಾಗಿಯೂ (ಸಹಾಯಕಳಾಗಿ), ಉದ್ದಿಶ್ಯಗಳಲ್ಲಿ ಮಂತ್ರಿಯಾಗಿಯೂ, ಉಣಿಸುವುದರಲ್ಲಿ ತಾಯಿಯಾಗಿಯೂ, ಕ್ಷಮಿಸುವುದರಲ್ಲಿ ಭೂಮಿಯಂತೆಯೂ, ಹಾಸಿಗೆಯಲ್ಲಿ ವೇಶ್ಯೆಯಂತೆಯೂ (ನಿರ್ಲಜ್ಜೆಯಿಂದ) ಗಂಡನ ಜತೆ ವರ್ತಿಸಬೇಕೂಂತ ಶ್ಲೋಕ ರೂಪದಲ್ಲಿ ಉಪದೇಶ ಮಾಡುತ್ತಾನೆ. ಇವೆಲ್ಲಾ ಗಂಡನಿಗೆ ಒಪ್ಪಿಗೆ ಇದ್ದರೆ ಪ್ರಯೋಜನಕಾರಿಯಾದೀತು. ಆದರೆ ಪುರುಷನೇ ಮೇಲು ಎಂದು ಅಹಂಭಾವವಿರುವ ಗಂಡನು ಹೆಂಡತಿಯಿಂದ ಐದರಲ್ಲಿ ಬರೇ ನಾಲ್ಕನ್ನು ಅಪೇಕ್ಷಿಪಟ್ಟಾನು (ಅಂದರೆ ಕರಣೇಷು ಮಂತ್ರಿಯನ್ನು ಹೊರತಾಗಿ - ಹೆಂಡತಿಯ ಮಾತು, ಅಭಿಪ್ರಾಯಗಳನ್ನು ಕೇಳುವವರು ಎಷ್ಟು ಮಂದಿ ಇದ್ದಾರೆ?) ಇದಕ್ಕೆ ಬೇಕಾಗಿಯೇ ವಧುವಿನ ತಂದೆಯು ಇದೇ ಸಮಯ 'ಧರ್ಮೇಚ, ಅರ್ಥೇಚ, ಕಾಮೇಚ ನಾತಿಚರಾಮಿ' ಅಂದರೆ ಧರ್ಮಕಾರ್ಯದಲ್ಲಿಯೂ, ಹಣಗಳಿಕೆಯಲ್ಲಿಯೂ, ಕಾಮದಲ್ಲಿಯೂ ಕನ್ಯೆಯ ಇಚ್ಛೆಗೆ ವಿರುದ್ಧವಾಗಿ ನಡೆಯುವುದಿಲ್ಲಾಂತ ವರನಿಂದ ಒಂದು ಮಾತು ತಗೊಳ್ಳುತ್ತಾನೆ.

ಹೆಂಡತಿಯಾದವಳು ಗಂಡನ ಮನೆಯಲ್ಲಿ ಹೇಗಿರಬೇಕು ಎಂಬುದಕ್ಕೆ ಪುರಂದರದಾಸರು "ಹೊತ್ತು ಹೊತ್ತಿಗೆ ಮನೆಯ ಕೆಲಸವಮಾಡು, ಅತ್ತೆ-ಮಾವಂದಿರಿಗೆ ಅಂಜಿಕೊಂಡು ಇರು" ಇತ್ಯಾದಿ ಹಿತವಚನಗಳೊಂದಿಗೆ 'ಬುದ್ಧಿಮಾತನು ಹೇಳಿದರೆ ನೀ ಕೇಳಬೇಕಮ್ಮ' ಎಂಬ ಪದ್ಯದಲ್ಲಿ ಸವಿವರ ಹೇಳುತ್ತಾರೆ. ಹಾಗೆಯೇ ಗಂಡನಿಗೆ ಬುದ್ಧಿವಾದದ ಮಾತುಗಳು ಕೇಳಿ ಬರುವುದು ಕಡಿಮೆ. ಇದು ಪುರುಷಪ್ರಧಾನವಾಗಿದ್ದ ಪುರಂದರ ದಾಸರ ಕಾಲಕ್ಕೆ ಸಮಂಜಸವಾಗಿದ್ದಿರಬಹುದು.

ಗಂಡ-ಹೆಂಡಿರ ಸರಸಸಲ್ಲಾಪಗಳ ಬಗ್ಗೆ ಉಲ್ಲೇಖ, ಚಿತ್ರಣಗಳನ್ನು ಗದ್ಯ-ಪದ್ಯ ಸಾಹಿತ್ಯಗಳಲ್ಲಿ, ನಾಟಕಗಳಲ್ಲಿ, ಚಲನಚಿತ್ರಗಳಲ್ಲಿ ಯಾವಾಗಲೂ ನೋಡುತ್ತಿರುತ್ತೇವೆ ಯಾ ಕೇಳುತ್ತಿರುತ್ತೇವೆ. ಉದಾ: ಮುದ್ದಣ-ಮನೋರಮೆಯರ ಸಲ್ಲಾಪ, ಸರ್ವಜ್ಞನ ವಚನ, ಇತ್ಯಾದಿ. ನಿಜ ಜೀವನದಲ್ಲಿಯೂ ಇದರ ಸ್ವರೂಪ ಕಾಣಸಿಗುತ್ತವೆ. ಮದುವೆಯಾದ ಹೊಸತರಲ್ಲಿ ಗಂಡ ಕರೆಯದಿದ್ದರೂ 'ಕರೆದ್ರಾ'ಂತ ಹೆಂಡತಿ ಅಡಿಗೆಮನೆಯಿಂದ ಹೊರಗೆ ಬಂದು ಕೇಳುವುದನ್ನು ನಿಮ್ಮಲ್ಲಿ ಹಲವಾರು ಮಂದಿ ಅನುಭವಿಸಿರಬಹುದು. ಒಂದು ವರ್ಷ ಕಳೆದ ಮೇಲೆ ಅವಳು ಗಂಡ ಕರೆದಾಗ ಮಾತ್ರ ಬರಲು ಪ್ರಾರಂಭಿಸುತ್ತಾಳೆ. ಒಂದು ಮಗುವಾದ ಮೇಲೆ ಗಂಡ ಕರೆದಾಗ, 'ಏನಾಗ್ಬೇಕಿತ್ತೂ'ಂತ ಒಳಗಿನಿಂದಲೇ ಕೇಳುತ್ತಾಳೆ. ಎರಡನೇ ಮಗುವಾದ ನಂತರ ಗಂಡ ಕರೆದಾಗ, "ನಾನು ಮಗುವಿಗೆ ಹಾಲು ಕೊಡ್ತಾ ಇದ್ದೇನೆಂತ ನಿಮಗೆ ಗೊತ್ತಿಲ್ವಾ, ನಿಮಗೆ ಬೇಕಿದ್ದನ್ನು ನೀವೇ ತಗೊಳ್ಳಿ/ ಮಾಡ್ಕೊಳ್ಳಿ"ಂತ ಹೇಳ್ತಾಳೆ. ಇದು ಹೆಂಡತಿಯ ವರ್ತನೆಯಾದರೆ, ಗಂಡನದು ಇನ್ನೊಂದು ತರ. ಮದುವೆಯಾದ ಹೊಸತರಲ್ಲಿ 'ಮದುಮಗಳೇ ಎಲ್ಲಿದ್ದೀಯಾ, ಬಾ'ಂತ ಕರೀತಾನೆ. ಒಂದು ಮಗುವಾದ ಮೇಲೆ ಅವಳ ಹೆಸರು ಹೇಳಿ ಕರೀತಾನೆ. ಹಲಕಾಲ ಆದ ಮೇಲೆ, "ಏ ಕೊಲೆ ಎಲ್ಲಿ ಸತ್ತು ಬಿದ್ದಿದ್ದೀಯಾ"ಂತ ಕರೀತಾನೆ. ನೋಡಿ ಹೇಗೆ ಲಕ್ಷ್ಮೀಸ್ವರೂಪಿಯಾದ ಧರ್ಮಪತ್ನಿಯನ್ನು ಸಂಬೋಧಿಸುವುದು! ಇಂಗ್ಲೀಷ್‌ನಲ್ಲಿ ಒಂದು ಜೋಕ್ ಇದೆ. ಮದುವೆಗೆ ಮುಂಚೆ ಗಂಡ (ಆಗಲಿರುವವ) ಹೇಳ್ತಾ ಇರ್ತಾನೆ, ಹೆಂಡ್ತಿ (ಆಗಲಿರುವವಳು) ಕೇಳ್ತಾ ಇರ್ತಾಳೆ. ಮದುವೆ ಆದ ಮೇಲೆ ಹೆಂಡ್ತಿ ಹೇಳ್ತಾ ಇರ್ತಾಳೆ, ಗಂಡ ಕೇಳ್ತಾ ಇರ್ತಾನೆ. ಮಕ್ಕಳಾದ ಮೇಲೆ ಇಬ್ರೂ ಹೇಳ್ತಿರ್ತಾರೆ (ಗಟ್ಟಿಯಾಗಿ) ಪಕ್ಕದಮನೆಯವರು ಕೇಳ್ತಿರ್ತಾರೆ! ಅದೇನೇ ಇರಲಿ, "ಗಂಡ-ಹೆಂಡಿರ ಜಗಳ ಉಂಡು ಮಲಗುವ ವರೆಗೇ"ಂತ ಹೇಳ್ತಾರೆ. ಇದು ಎಷ್ಟರ ಮಟ್ಟಿಗೆ ಸತ್ಯ ಅಂತ ಅವರವರು ಅನುಭವಿಸಿಯೇ ಗೊತ್ತಾಗಬೇಕು. ಯಾಕೆಂದರೆ ಎಷ್ಟೋ ದಂಪತಿಗಳಲ್ಲಿ (ಮುದುಕರಲ್ಲಿ) ಜಗಳ ಉಂಡು ಮಲಗಿದ ಮೇಲೆಯೇ ಶುರುವಾಗುವುದು ಯಾ ಮೊದಲು ಶುರುವಾದದ್ದು ಮುಂದುವರಿಯುವುದೂ ಉಂಟಂತೆ.

ಹೆಂಡತಿ ಜೋರಾಗಿ, ಗಂಡ, ಹೆಂಡತಿಯ ಆಜ್ಞಾಪಾಲಕನಾಗಿದ್ದರೆ ಯಾ ಶಾಂತ ಸ್ವಭಾವದವನಾಗಿದ್ದರೆ ಅವನನ್ನು 'ಅಮ್ಮಾವ್ರ ಗಂಡಾ'ಂತ ಕನ್ನಡದಲ್ಲಿಯೂ, 'ಜೋರೂ-ಕಾ-ಗುಲಾಮ್'ಂತ ಹಿಂದಿಯಲ್ಲಿಯೂ, 'ಹೆನ್ ಪೆಕ್ಡ್'ಂತ ಇಂಗ್ಲಿಷ್‌ನಲ್ಲಿಯೂ ಹೇಳುತ್ತಾರೆ. ಅದೇನೇ ಇರಲಿ, ಒಂದೋ ಗಂಡ ಜೋರಾಗಿರಬೇಕು ಇಲ್ಲಾ ಹೆಂಡ್ತಿ ಜೋರಾಗಿರಬೇಕು ಇಲ್ಲಾ ಇಬ್ರೂ ಶಾಂತ ಸ್ವಭಾವದವರಾಗಿರಬೇಕು. ಇಬ್ರು ಜೋರಾಗಿಬಿಟ್ರೆ (ಇವರ ಜಗಳವನ್ನು) ಪಕ್ಕದ ಮನೆಯವರು ಕೇಳಿಕೊಂಡಾರು. ಅಪೇಕ್ಷಿತ ವಧೂ-ವರರ ಜಾತಕದ ಹೊಂದಾಣಿಕೆಯಲ್ಲಿ 'ಸಮಸಪ್ತಕ' ಕೂಟ ಅಂತ ಇರುತ್ತದಂತೆ. ಈ ಕೂಟಕ್ಕೆ ಬರುವವರು ಇಬ್ಬರೂ ಜೋರಾಗಿಯೇ ಇರುತ್ತಾರಂತೆ. ಹಾಗಂತ ಜೋಯಿಸರು ಹೇಳ್ತಾರೆ, ನಮ್ಮ ಅನುಭವಕ್ಕೂ ಬಂದಿದೆ - ಯಾಕೆಂದರೆ ನನಗೂ ಈ ಕೂಟ (ಕಾಟ) ಬಂದಿದೆ ಎಂದರೆ ನಿಮಗೆ ನನ್ನ ಮೇಲೆ 'ಅಯ್ಯೋ ಪಾಪಾ'ಂತ ಅನುಕಂಪ ಬರಲೇಬೇಕು. ನಮಗೆ ಈ ಸಂಗತಿ ಮದುವೆ ಆದ ಮೇಲೆ ಗೊತ್ತಾಗಿದ್ದುದು. ಇಲ್ಲದಿದ್ದರೆ ಈ ಮದುವೆಗೆ ನಾನು ಸಮ್ಮತಿಸುತ್ತಿರಲಿಲ್ಲವೋ ಏನೋ. ಹಾಗಂತ ಈ ವಿಷಯವನ್ನು ನನ್ನ ಹೆಂಡತಿಗೆ ದಯವಿಟ್ಟು ಹೇಳಬೇಡಿ. ಅವಳಿಗೆ ಗೊತ್ತಾದರೆ ನಮ್ಮ ಮನೆಯಲ್ಲಿ ರಾಮಾಯಣ, ಮಹಾಭಾರತ ಎಲ್ಲಾ ನಡೆದೇ ಹೊಗುತ್ತದೆ ಎಂಬ ದೃಢವಾದ ವಿಶ್ವಾಸ ನನ್ನದು.

ಒಂದು ವಿಷಯ. ಹೆಂಡ್ತಿ ಜೋರಾಗಿದ್ದರೆ ತಾನು ಅದೃಷ್ಟವಂತಾಂತ ಹೇಳುವ ಗಂಡಂದಿರೂ ಇದ್ದಾರೆ. ಇದಕ್ಕೆ ದೃಷ್ಟಾಂತ ನಾನೇ ಕಂಡು -ಕೇಳಿದ್ದು. ನಾನು ಪುಣೆಯಲ್ಲಿ ಬ್ಯಾಂಕ್ ನೌಕರಿಯಲ್ಲಿದ್ದಾಗ (1976), ನಮ್ಮ ಮ್ಯಾನೇಜರ್ರು ಸಾಯಂಕಾಲ ಮನೆಗೆ ಹೋಗುವ ಹೊತ್ತಿನಲ್ಲಿ ನನ್ನತ್ರ 2 ರೂಪಾಯಿ ಸಾಲ ಕೇಳಿದ್ರು. ನನಗೆ ಆಶ್ಚರ್ಯವಾಗಿ "ನೀವು ಬ್ಯಾಂಕ್ ಮ್ಯಾನೇಜರಾಗಿದ್ದುಕೊಂಡು 2 ರೂ. ಸಾಲ ಕೇಳಲು ನಿಮಗೆ ನಾಚಿಕೆಯಾಗುವುದಿಲ್ಲವಾ'ಂತ ಕೇಳಿಯೇ ಬಿಟ್ಟೆ. ಅವರು ಶಾಂತವಾಗಿ "ನೋಡಿ ಶಾಸ್ತ್ರಿಯವರೇ, ನಾನೊಬ್ಬ ಸುಖೀ ಪುರುಷ ಹಾಗಾಗಿ"ಂತ ಉತ್ತರ ಕೊಟ್ರು. ನನಗಿನ್ನೂ ಕುತೂಹಲ ಹೆಚ್ಚಾಯಿತು. 'ಅದು ಹೇಗೆ'ಂತ ಕೇಳಿದೆ. ಅದಕ್ಕವರ ಉತ್ತರ ಕೇಳಿದ್ರೆ ನೀವೂ ಅವರು ನಿಜವಾಗಿಯೂ ಸುಖೀ ಪುರುಷಾಂತ ನಂಬಬಹುದು ಮತ್ತು ಅವರ ಅನುಕರಣೆಯನ್ನೂ ಮಾಡಬಹುದು. (ಪರಿಣಾಮಕ್ಕೆ ನಾನು ಹೊಣೆಗಾರನಲ್ಲ ಎಂಬುದು ನೆನಪಿರಲಿ). "ನೋಡಿ ಶಾಸ್ತ್ರಿಯವರೇ, ನಾನು ಕೈಗೆ ಬರುವ ಸಂಬಳವನ್ನೆಲ್ಲಾ ನನ್ನ ಹೆಂಡ್ತಿಯವರ ಕೈಯಲ್ಲಿ ತಿಂಗಳ ಶುರುವಿಗೇ ಕೊಟ್ಟುಬಿಡ್ತೇನೆ. ಮನೆಯ ಖರ್ಚು, ರಾಷನ್, ಮಕ್ಕಳ ಶಾಲೆಯ ಖರ್ಚು, ಮದ್ದು, ಬಟ್ಟೆ - ಬರೆ ಇತ್ಯಾದಿ ಎಲ್ಲ ಖರ್ಚು ಲೆಕ್ಕಾಚಾರಗಳನ್ನು, ಉಳಿತಾಯವನ್ನೂ ಅವರೇ ಮಾಡ್ತಾರೆ, ನೋಡ್ತಾರೆ. ನನಗೆ ಯಾವ ತಲೆ ಬಿಸಿಯೂ ಇಲ್ಲ. ನನ್ನ ಆಫೀಸು ಆಯ್ತು, ನಾನು ಆಯ್ತು. ನನಗೆ ದಿನಖರ್ಚಿಗೆ 5 ರೂ. ಕೊಡ್ತಾರೆ.

*PAGE DONATED BY :* ***SHRI N. R. HEGDE,*** *DOMBIVLI (DEC.-2013)*

2 ರೂ. ಆಫೀಸಿಗೆ ಬರಲು ರಿಕ್ಷಾಕ್ಕೆ, 2 ರೂ. ಮನೆಗೆ ವಾಪಸು ಬರಲು ರಿಕ್ಷಾಕ್ಕೆ. ಉಳಿದ ಒಂದು ರೂ. ಬೆಳಿಗ್ಗೆ ಮತ್ತು ಸಾಯಂಕಾಲದ ಚಹಾ ಕುಡೀಲಿಕ್ಕೆ". "ಹಾಗದ್ರೆ ಇವತ್ತೇನಾಯ್ತು 5 ರೂ. ಕೊಡ್ಲಿಲ್ಲಾ ಅವ್ರು" ಅಂತ ಕೇಳಿದೆ. "ಇವತ್ತು ಅವ್ರ ಹತ್ರ 5 ರೂ. ಚೇಂಜ್ ಇದ್ದಿಲ್ಲ. ಇದ್ದದ್ದು ನಾಲ್ಕೇ ರೂ. ಹತ್ತರ ನೋಟಿತ್ತು. ಆದ್ರೆ ನಾನೆಲ್ಲಿಯಾದ್ರೂ ಹೆಚ್ಚು ಖರ್ಚು ಮಾಡಿ ಬಿಡ್ತೇನೋಂತ ಅದನ್ನು ನನ್ನತ್ರ ಕೊಡ್ಲಿಕ್ಕೆ ಅವರಿಗೆ ಧೈರ್ಯ ಇದ್ದಿಲ್ಲ. ನೀವೀಗ ನನಗೆ 2 ರೂ. ಸಾಲ ಕೊಡುವುದಾದ್ರೆ ಕೊಡಿ ಇಲ್ಲದಿದ್ರೆ ಬಿಡಿ, ಕೊಡದಿದ್ರ ನಾನು ನಡ್ಕೊಂಡು ಹೋಗಿಯೇ ಬಿಡ್ತೇನೆ". ಪಾಪ. ಇಷ್ಟೆಲ್ಲಾ ರಾಮಾಯಣ ಕೇಳಿದ ಮೇಲೆ 2 ರೂ. ಸಾಲ ಕೊಟ್ಟೆ. ಮರುದಿನ ವಾಪಾಸು ಕೊಟ್ರು. ಈ ಸಂಗತಿ ಗೊತ್ತಾದ ನನ್ನ ಶ್ರೀಮತಿಯೂ ನನ್ನ ಸಂಬಳವನ್ನೆಲ್ಲಾ ಅವಳ ಕೈಗೆ ಕೊಡಬೇಕೂಂತ ಹಠ ಹಿಡಿದ್ಳು. ಹೇಗೂ ನಾನು ಬ್ಯಾಂಕ್ ಆಫೀಸರ್. ಒಂದು ಉಪಾಯ ಮಾಡಿದೆ. ಅವಳ ಹೆಸರು ಮೊದಲಿರುವ (ನನ್ನ ಹೆಸರೂ ಸೇರಿರುವ) ಜಂಟಿ ಖಾತೆ ತೆರೆದು ಅದರಲ್ಲಿ ನನ್ನ ಸಂಬಳವನ್ನೆಲ್ಲಾ ಜಮೆ ಮಾಡಲು ಸುರು ಮಾಡಿದೆ. ಅದರಿಂದ ಹಣ ತೆಗೆಯುತ್ತಿದ್ದದು ನಾನೊಬ್ನೇ. ಅದು ಬೇರೆ ಸಂಗತಿ ಬಿಡಿ. ಅದರಲ್ಲಿರುವ ಬ್ಯಾಲೆನ್ಸ್ ಎಷ್ಟೂಂತ ಅವಳು ಯಾವತ್ತೂ ಕೇಳದಿರುತ್ತಿದ್ದದ್ದು ನನ್ನ ಪುಣ್ಯ! ಬಹುಷಃ ಇಂಥವರನ್ನು ನೋಡಿಯೇ "ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದು ಕೋಟಿ ರೂಪಾಯಿ" ಅಂತ ಪದ್ಯ ಬರೆದದ್ದಾಗಿರಬಹುದು.

ಹಿಂದಿನ ಕಾಲದಲ್ಲಿ ಗಂಡ-ಹೆಂಡಿರು ಸಮಾನ ವಯಸ್ಕರಾಗಿರುತ್ತಿದ್ದಿಲ್ಲ. ಯಾವಾಗಲೂ ಗಂಡ, ಹೆಂಡತಿಗಿಂತ ಸಾಮಾನ್ಯವಾಗಿ 5-10 ವರ್ಷಗಳಿಂದ ಹಿರಿಯವನಾಗಿರುತ್ತಿದ್ದ. ಇದಕ್ಕೆ ವ್ಯತಿರಿಕ್ತವಾಗಿ ನಮ್ಮ ಒಬ್ರು ಪ್ರಾಂಶುಪಾಲರಿದ್ರು. ಅವರ ಧೋರಣೆಯ ಪ್ರಕಾರ ಗಂಡ - ಹೆಂಡಿರೆಂದೂ ಸಮ ವಯಸ್ಕರಾಗಿರಬಾರದು. ಒಂದೋ ಗಂಡ ಹೆಚ್ಚು ಪ್ರಾಯ ದವನಾಗಿರಬೇಕು ಯಾ ಹೆಂಡ್ತಿ. ಅವರ ಹೆಂಡ್ತಿ ಅವರಿಗಿಂತ 2 ವರ್ಷ ಹಿರಿಯವರಾಗಿದ್ದರು. ಬಹುಷಃ ಅವರ ಪ್ರೇರಣೆಯಿಂದಲೇ ಐಶ್ವರ್ಯ ರೈ ಕಿರಿಯವನಾದ ಅಭಿಷೇಕ್‌ನನ್ನು ಮದುವೆಯಾದದ್ದಾಗಿರಬಹುದು. ಇರಲಿ ಬಿಡಿ. ಇಂದಿನ ಕಾಲದಲ್ಲಿ ಇಂಥಾ ಮದುವೆಗಳು ಸರ್ವಸಾಮಾನ್ಯ.

ಪ್ರಾಯದ ಹಾಗೇ, ಗಂಡ - ಹೆಂಡಿರಲ್ಲಿ ದೇಹದ ಗಾತ್ರ (ಸುತ್ತಳತೆ), ಎತ್ತರಗಳಲ್ಲಿ ಸರಿ ಸಮಾನತೆ ಇರಬೇಕೆಂಬುದೇನಿಲ್ಲ. ನಮ್ಮಲ್ಲಿ ಹೆಂಡತಿಗೆ ಗಂಡನ ಅರ್ಧಾಂಗೀ ಅಂತ ಹೇಳ್ತಾರೆ. ಒಬ್ಳು ಹುಡುಗಿ ಮದುವೆ ಆದ ಮೇಲೆ ದಪ್ಪ ಆಗುವುದು ಸರ್ವಸಾಮಾನ್ಯ. ಅಂದರೆ ಒಬ್ಬ ಗಂಡಸು ಮದುವೆ ಆದಾಂತಂದ್ರೆ ಅವನ ಹೆಂಡ್ತಿಯಾದವಳು ಒಂದೂವರೆ ಆಗ್ತಾಳೆ (ಅವಳ ಒಂದು ಪಾಲು ಮತ್ತು ಗಂಡನ ಅರ್ಧ ಪಾಲು), ಗಂಡ ಬರೇ ಅರ್ಧವಾಗಿ ಬಿಡ್ತಾನೆ (ಗಾತ್ರದಲ್ಲಿಯೂ, ಬ್ಯಾಂಕ್ ಬ್ಯಾಲೆನ್ಸಿನಲ್ಲಿಯೂ!) ಹಾಗಾಗಿ 'ಅರ್ಧಾಂಗಿ' ಎನ್ನುವುದು ಅನ್ವರ್ಥವಲ್ಲವೇ? ದಪ್ಪಗಾಗಿದ್ದಾಳೇಂದ್ರೆ ಅವಳು ಗಂಡನ ಜತೆಯಲ್ಲಿ ಸಂತೋಷದಿಂದ್ದಾಳೇಂತಲೂ ಭಾವಿಸಬಹುದು. ಅದು ಬೇರೆ ಸಂಗತಿ. ಇದು ನಾನೂ ಜೀವನದಲ್ಲಿ ಕಂಡ ವಿಷಯ. ನನ್ನ ಪರಿಚಯಸ್ಥರೊಬ್ಬರು ಮದುವೆ ಆದಾಗ ಅವರೂ ಅವರ ಹೆಂಡ್ತಿಯೂ ಸಮಾನ ಗಾತ್ರದವರಾಗಿದ್ದರೆನ್ನಬಹುದು. ಸ್ವಲ್ಪವೇ ಸಮಯದಲ್ಲಿ ಅವರ ಶ್ರೀಮತಿಯವರು ನಿಜವಾಗಿಯೂ ಇವರ 'ಅರ್ಧಾಂಗಿ'ಯಾಗಿ ಬಿಟ್ಟಳು. ಇವರು ಅರ್ಧವಾಗಿ ಬಿಟ್ಟಿದ್ದರು. ಆಗ ಅವರ ಹತ್ರ ಒಂದು ಸ್ಕೂಟರ್ ಇತ್ತು. ಈ ಅರ್ಧಾಂಗಿಯನ್ನು ಸ್ಕೂಟರಿನಲ್ಲಿ ಕುಳ್ಳಿರಿಸಿ ಕರೆದುಕೊಂಡು ಹೋಗಲು ಇವರು ಪಟ್ಟ ಬವಣೆ ಹೇಳಿ ತೀರದು. ಇವಳು ಕುಳಿತುಕೂಡಲೇ ಮುಂದಿನ ಚಕ್ರ ಮೇಲೇಳುತ್ತಿತ್ತು. ಬ್ಯಾಲೆನ್ಸ್ ಮಾಡಲು ಇವರು ಮುಂದೆ ಬಗ್ಗಿಕೊಂಡೇ ಚಲಾಯಿಸಬೇಕಾಗುತ್ತಿತ್ತು. ರಾತ್ರಿಯಂತೂ ಹೆಡ್ ಲೈಟ್ ಆಕಾಶಕ್ಕೇ ಹೋಗುತ್ತಿತ್ತು ಎಂದರೆ ನೀವು ನಂಬಲಾರಿರಿ. ಇನ್ನು, ನಮ್ಮ ಪ್ರಾಂಶುಪಾಲರ ಧೋರಣೆಯ ಪ್ರಕಾರ, ಹೆಂಡತಿ ಯಾವಾಗಲೂ ಗಂಡನಿಗಿಂತ ಹೆಚ್ಚು ಎತ್ತರವಾಗಿರಬೇಕು. ಯಾಕಂತಂದ್ರೆ, ಗಂಡನಾದವ ಹೆಂಡತಿಗೆ ಕೂಡ ತಲೆ ತಗ್ಗಿಸಬೇಕಾಗುವುದಿಲ್ಲ. ಹೆಂಡತಿಯೇ ಗಂಡನಿಗೆ (ಗಂಡನ ಕಡೆಗೆ) ತಲೆ ತಗ್ಗಿಸಬೇಕಾಗುತ್ತದೆ (ಮುದ್ದು ಮಾಡಲು). ಹಾಗಾಗಿಯೇ ಅವರ ಹೆಂಡ್ತಿ ಅವರಿಗಿಂತ 2 ಇಂಚು ಉದ್ದ ಇದ್ರು. ಬಹುಷಃ ಇಂಥವರನ್ನೆಲ್ಲ ನೋಡಿಯೇ ಅಮಿತಾಭ್ ಬಚ್ಚನ್ ಲಾವಾರಿಸ್ ಸಿನೆಮಾದಲ್ಲಿ "ಮೇರೇ ಅಂಗನೇಮೇ ತುಮ್ಹಾರಾ ಕ್ಯಾ ಕಾಮ್ ಹೈ" ಅಂತ ಪದ್ಯ ಹಾಡಿದ್ದಾಗಿರಬಹುದು.

ಗಂಡ - ಹೆಂಡಿರಲ್ಲಿ ಪರಸ್ಪರ ಪ್ರೀತಿ, ಪ್ರೇಮ, ನಂಬಿಕೆ, ವಿಶ್ವಾಸಗಳು ಇರಬೇಕೆಂಬುದು ನಮ್ಮ ಸಂಸ್ಕೃತಿ. ಆದರೆ ಇಂದಿನ ದಿನಗಳಲ್ಲಿ ಇದು ವಿರಳವಾಗ್ತಾ ಇದ್ದು ಇಬ್ಬರೂ ಸಂಪಾದನೆ ಮಾಡ್ತಾ ಇದ್ರೆ, ವಿವಾಹ ವಿಚ್ಛೇದನಕ್ಕೆ ಕೂಡಾ ಕಾರಣವಾಗ್ತಾ ಇದೆ. ನಾನು ದಿಲ್ಲಿಯಲ್ಲಿ ಬ್ಯಾಂಕ್ ಮ್ಯಾನೇಜರಾಗಿದ್ದಾಗಿನ ಘಟನೆ (1978). ಬ್ಯಾಂಕಿನ ಹೊಸ ಶಾಖೆ. ಹೊಸ ಹೊಸ ಖಾತೆ ತೆರೆಯಲು ವಿನಂತಿಸಿಕೊಳ್ಳುತ್ತಿದ್ದ ಕಾಲ. ಬ್ಯಾಂಕಿನ ಹತ್ತಿರವೇ ಇದ್ದ ಒಂದು ಮನೆಗೆ ಹೊಕ್ಕೆವು. ಗಂಡ ವಿದೇಶ ಮಂತ್ರಾಲಯದಲ್ಲಿ ದೊಡ್ಡ ಅಧಿಕಾರಿ. ಹೆಂಡತಿ ವಿತ್ತ ಮಂತ್ರಾಲಯದಲ್ಲಿ ದೊಡ್ಡ ಅಧಿಕಾರಿ. ಇಬ್ರಿಗೂ ಕೈತುಂಬಾ ಸಂಬಳ + ಲಂಚ. ನಮ್ಮ ಮಾತುಗಳನ್ನು ಆಲಿಸಿ, ನಮ್ಮಲ್ಲಿ ಜಂಟಿ ಖಾತೆ ತೆರೆಯಲು ಒಪ್ಪಿದರು. ೧೦೦ ರೂಪಾಯಿ ಹಾಕಿ ಜಂಟಿ ಖಾತೆಯನ್ನೂ ತೆರೆದಾಯಿತು. ಕೆಲ ದಿನಗಳ ನಂತರ ಗಂಡ ಬ್ಯಾಂಕಿಗೆ ಬಂದು ನನ್ನ ಒಂಟಿ (ಸಿಂಗಲ್) ಖಾತೆ ತೆರೆಯಿರಿ ಆದರೆ ನನ್ನ ಹೆಂಡತಿಗೆ ಗೊತ್ತಾಗಬಾರದು ಎಂದು ವಿನಂತಿಸಿದ. ನಮ್ಮ ಗೌಪ್ಯದ ಜವಾಬ್ದಾರಿಯ ಪ್ರಕಾರ ಆಯ್ತೂಂತ ಹೇಳಿದೆ. ಆ ಪ್ರಕಾರ ಒಂಟಿ ಖಾತೆ ತೆರೆದಾಯಿತು. ಈ ಒಂಟಿ ಖಾತೆಯಲ್ಲಿ ಲಕ್ಷಗಟ್ಟಲೆ ಹಣ ತುಂಬುತ್ತಿತ್ತು. ನನ್ನ ಮನಸ್ಸೂ ಸಂತೋಷಗೊಳ್ಳುತ್ತಿತ್ತು. ಕೆಲ ದಿನಗಳ ನಂತರ ಹೆಂಡ್ತಿ ಒಬ್ಳೇ ಬ್ಯಾಂಕಿಗೆ ಬಂದು ನನ್ನದೊಂದು ಒಂಟಿ ಖಾತೆ ತೆರೆಯಬೇಕು ಆದ್ರೆ, ನನ್ನ ಗಂಡನಿಗೆ ಗೊತ್ತಾಗಬಾರದು ಎಂದು ವಿನಂತಿಸಿದಳು. ನಮ್ಮ ಗೌಪ್ಯದ ಜವಾಬ್ದಾರಿಯ ಪ್ರಕಾರ ಆಯ್ತೂಂತ ಹೇಳಿದೆ. ಆ ಪ್ರಕಾರ ಅವಳ ಒಂಟಿ ಖಾತೆ ತೆರೆದಾಯಿತು. ಈ ಒಂಟಿ ಖಾತೆಯಲ್ಲಿಯೂ ಲಕ್ಷಗಟ್ಟಲೆ ಹಣ ತುಂಬುತ್ತಿತ್ತು. ನನ್ನ ಮನಸ್ಸೂ ಸಂತೋಷಗೊಳ್ಳುತ್ತಿತ್ತು. ನಾನೂ ಈ ವಿಷಯ ಗುಪ್ತವಾಗಿಯೇ ಇಟ್ಟಿದ್ದೆ. ನನಗೆ ಒಂದು ಖಾತೆಯ ಬದಲಿಗೆ ಮೂರು ಖಾತೆಗಳು ಸಿಕ್ಕಿದ್ದವು. ಆದರೆ ಅವರ ಜಂಟಿ ಖಾತೆಯೊಳಗೆ ಏನೂ ಹಣ ಬೀಳುತ್ತಿದ್ದಿಲ್ಲ. ಗಂಡ ಅವನ ಖಾತೆಗೆ ಹಣ ಹಾಕುತ್ತಿದ್ದುದು ಹೆಂಡತಿಗೆ ಗೊತ್ತಾಗುತ್ತಿದ್ದಿಲ್ಲ. ಹೆಂಡತಿ ಅವಳ ಖಾತೆಗೆ ಹಣ ಹಾಕುವುದು ಗಂಡನಿಗೆ ಗೊತ್ತಾಗುತ್ತಿದ್ದಿಲ್ಲ. ಒಂದು ದಿನ ಇಬ್ರೂ ಬ್ಯಾಂಕಲ್ಲಿ ಒಬ್ಬರಿಗೊಬ್ಬರು ಭೇಟಿಯಾದಾಗ ಇಬ್ರಿಗೂ ಜಗಳ ಪ್ರಾರಂಭವಾಯಿತು. ನೀನು ತರಕಾರಿ ತರಲು ಹೋಗ್ತೀನೀಂತ ಹೇಳಿ ಇಲ್ಲಿಗೆ ಬಂದಿಯಾಂತ ಗಂಡ ಹೆಂಡ್ತಿಗೆ ಬೈತಾ ಇದ್ದ. ನೀನು ಕ್ಷೌರಕ್ಕೆ ಹೋಗ್ತೇನೇಂತ ಹೇಳಿ ಇಲ್ಲಿಗೆ ಬಂದೀಯಾಂತ ಹೆಂಡ್ತಿ ಗಂಡನಿಗೆ ಬೈತಾ ಇದ್ಳು. ಕೊನೆಗೆ ಒಂಟಿ ಖಾತೆಗಳ ಬಗ್ಗೆ ಇಬ್ರಿಗೂ ಗೊತ್ತಾದಾಗ ಇಬ್ರೂ ನನ್ನತ್ರ ಬಂದು ಗಂಡನ ಒಂಟಿ ಖಾತೆ ಬಗ್ಗೆ ನನಗೆ ತಿಳಿಸಿಲ್ಲಾಂತ ಹೆಂಡ್ತಿಯೂ, ಹೆಂಡ್ತಿಯ ಒಂಟಿ ಖಾತೆಯ ಬಗ್ಗೆ ನನಗೆ ತಿಳಿಸಿಲ್ಲಾಂತ ಗಂಡನೂ ನನ್ನನ್ನು ತರಾಟೆಗೆ ತಗೊಂಡ್ರು. ಕೊನೆಗೆ ಇಬ್ರಿಗೂ ನಮ್ಮ ಗೌಪ್ಯತೆಯ ಜವಾಬ್ದಾರಿಯ ಬಗ್ಗೆ ನೆನಪಿಸಿದಾಗ ಇಬ್ರಿಗೂ ಸಮಾಧಾನವಾಯಿತು. ಅನಂತರ ಅವರು ಎರಡೂ ಒಂಟಿ ಖಾತೆಗಳನ್ನು ಮುಚ್ಚಿ ಜಂಟಿ ಖಾತೆಯಲ್ಲೇ ಹಣ ತುಂಬುತ್ತಿದ್ದರು.

ಹೇಗಿದೆ ಗಂಡ - ಹೆಂಡತಿಯರ ಸಂಬಂಧ?

*PAGE DONATED BY :* ***SHRI S. M. HEGDE,*** *SANTACRUZ (2013)*

# Annual General Body Meeting



The 50th Golden Jubilee Annual General Body Meeting was held on 28th September, 2014 at 3.00 P.M. at our new premises Deepti Solitaire, Ghatkopar West, Mumbai. President Mr. N. R. Hegde in his welcome speech briefed about the activities of the Trust and higlighted the progress made by the Trust over the last 50 years.He praised all the visionaries those who have worked for the Trust till date and said that not only the current committee but it is the collective efforts of all the members and donors who have contributed for the progress of the Trust.Mr.N.R.Hegde also appreciated the whole team for the success of our Trust's Golden Jubilee celebration which was held on 14th September, 2014 at Ravindra Natya Mandir, Prabhadevi,Mumbai.He further added that more and more people should join the Trust with an intention of serving the Trust.He requested all the members to encourage and support the committee members by giving their valid suggestions .The President also appreciated the committee members and said that despite their busy proffession and household work their contribution is noteworthy.

Homage was paid to the members who expired in the previous year by observing one minute silence. As the minutes of the previous AGM was circulated alongwith the Annual Report the same was treated as read and approved with majority. Mr. N. R. Hegde, President, asked the members whether the annual report which was already circulated can be taken as read and invited for queries if any. After discussion and satisfactory clarifications the annual report was approved.Audited accounts including Income and Expenditure Account and Balance Sheet were also taken up for discussion.

The same was also approved after all the querries were replied with satisfactory answers. N. K. Bhat & Co. were reappointed as the Statutory Auditors for the year 2014-2015. Mr. Umesh Hegde who till date served the Trust as Internal Auditor showed his inability to continue and hence Mr. R. G. Bhat was appointed as the new Internal Auditor of the Trust for the financial year 2014-2015.

Mr. S. P. Bhat, Hon.Returning Officer announced the names of six new managing committee members elected unanimously for the year 2014-2015 & 2015-2016, viz, Shri Shivkumar Bhagwat,Shri Sanjay Bhat, Shri R. N. Kameshwar, Smt.Tanuja Hegde,Shri Keshav Hegde & Shri Suresh Hegde. The meeting concluded with a vote of thanks from the General Secretary Mr. Narayan Akadas.

---

## ನೂತನ ಸಭಾಗೃಹದಲ್ಲಿ ವಾರ್ಷಿಕ ದುರ್ಗಾಪೂಜೆ



ಸೆಪ್ಟಂಬರ್ 28, 2014ರಂದು ಹವ್ಯಕ ಸಂಸ್ಥೆಯ ನೂತನ ಸಭಾಗೃಹ 'ಹವ್ಯಕರ ಸಭಾಗೃಹ'ದಲ್ಲಿ ವಾರ್ಷಿಕ ದುರ್ಗಾಪೂಜೆಯುನ್ನು ಆಯೋಜಿಸಲಾಗಿತ್ತು. ಧಾರ್ಮಿಕ ವಿಧಿ ವಿಧಾನದಂತೆ ಮೊದಲಿಗೆ ಪಂಚಗವ್ಯ ಹವನ ಹಾಗೂ ವಾಸ್ತುಪೂಜೆಗಳನ್ನು ನೆರವೇರಿಸಿ ನಂತರ ದುರ್ಗಾಪೂಜೆಯನ್ನು ಮಾಡಲಾಯಿತು. ಶ್ರೀ ಗೋಪಾಲ ಗಾಯತ್ರಿ ಅವರ ಪೌರೋಹಿತ್ಯದಲ್ಲಿ ಶ್ರೀಮತಿ ಶಶಿಕಲಾ ಹಾಗೂ ಶ್ರೀ ರೋಕೇಶ ಹೆಗಡೆ ದಂಪತಿಗಳು ಪೂಜೆಯ ಸಂಕಲ್ಪವನ್ನು ಕೈಗೊಂಡು ಶಾಸ್ತ್ರೋಕ್ತವಾಗಿ ಪೂಜೆಯನ್ನು ನೆರವೇರಿಸಿದರು.

ಹೆಂಗಳೆಯರು ಲಲಿತಾ ಸಹಸ್ರನಾಮ ಪಠಣದೊಂದಿಗೆ ಕುಂಕುಮಾರ್ಚನೆಯನ್ನು ಮಾಡಿದರು. ಹೂಗಳಿಂದ ಅಲಂಕೃತವಾದ ದೇವಿಗೆ ಮಂತ್ರಘೋಷ, ಜಯಕಾರ, ಜಾಗಟೆ, ಗಂಟೆಗಳ ಸದ್ದಿನೊಂದಿಗೆ ಮಂಗಳಾರತಿ ಮಾಡಲಾಯಿತು. ಸುವಾಸಿನಿಯರಿಗೆ ನವರಾತ್ರಿಯ ನಿಮಿತ್ತ ಅರಿಶಿನ, ಕುಂಕುಮ, ಹೂಗಳನ್ನು ನೀಡಲಾಯಿತು. ನೈವೇದ್ಯ ಪ್ರಸಾದದ ವಿತರಣೆಯ ನಂತರ ಪ್ರಸಾದ ಭೋಜನ.

ಪ್ರತಿ ವರ್ಷದಂತೆ ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಅಂಕ ಗಳಿಸಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ ಸನ್ಮಾನ ಪತ್ರ ಹಾಗೂ ಸ್ಕಾಲರ್‌ಶಿಪ್‌ನ್ನು ಅಧ್ಯಕ್ಷರಾದ ಶ್ರೀ ಎನ್. ಆರ್. ಹೆಗಡೆಯವರು ನೀಡಿ ಆಶೀರ್ವದಿಸಿದರು.

ಸನ್ಮಂಗಳೆಯಾದ ಶಾರದೆಯು ಎಲ್ಲರಿಗೂ ಮಂಗಲವನ್ನುಂಟು ಮಾಡಲಿ.

। ಸರ್ವೇ ಜನಾ ಸುಖಿನೋ ಭವಂತು ।

---

*PAGE DONATED BY :* ***SMT. SHANTA V. HEGDE,*** *CARMICHAEL ROAD (DEC.-2013)*

# ಪ್ರಕೃತಿ - ಪರಿಸರ

✍ ತದ್ದಲಸೆ ವಿಘ್ನೇಶ್ವರ ಶರ್ಮಾ

ಈ ಜೀವ ಜಗತ್ತಿನೊಂದಿಗೆ ಪ್ರಕೃತಿ ಪರಿಸರಗಳ ಸಂಬಂಧ ತೀರಾ ಅನ್ಯೋನ್ಯವಾದದ್ದು. ಅತ್ಯಂತ ಗಾಢವಾದದ್ದು. ಮನುಷ್ಯ ತಾನು ಸ್ವತಂತ್ರನೆಂದು ಎಷ್ಟೇ ಹೇಳಿಕೊಂಡರೂ ಇವುಗಳ ನಿಕಟ ಸಂಬಂಧದಿಂದ ದೂರ ಉಳಿದು ಬದುಕುವಂತಿಲ್ಲ. ಆತ ಸಮಾಜ ಜೀವಿ. ಸಮಾಜದಿಂದ ಬೇರ್ಪಡಿಸುವಂತಿಲ್ಲ. ಸುತ್ತಮುತ್ತಲಿನ ಪರಿಸರ ಅವನ ಬದುಕಿನ ಮೇಲೆ ವಿಶಿಷ್ಟ ಪ್ರಭಾವ ಬೀರುತ್ತದೆ. ಅದರೊಂದಿಗೇ ಅವನ ಬದುಕೂ ಸಾಗಬೇಕು. ಈ ಪರಿಸರದ ಪ್ರಕೃತಿ. ಈ ಪ್ರಪಂಚ ಪ್ರಕೃತಿಯಿಂದ ಬಂದದ್ದು. ಅದರಿಂದಲೇ ಬೆಳೆದದ್ದು. ಇಲ್ಲಿ ಏನೇ ಆಗಬೇಕಾದರೂ ಅದನ್ನು ಪ್ರಕೃತಿ ಪರಿಸರಗಳು ಅನುಗ್ರಹಿಸಬೇಕು. ಆದರಿಂದಲೇ ನಾವು ಬದುಕಬೇಕು, ಬೆಳೆಯಬೇಕು.

ಈ ಹಿನ್ನೆಲೆಯಲ್ಲಿ ನಾವು ಪ್ರಕೃತಿ ಪರಿಸರಗಳ ಬಾಂಧವ್ಯವನ್ನು ಹೇಗೆ ಮಧುರವಾಗಿ ಇರಿಸಿಕೊಳ್ಳಬೇಕೆಂಬುದನ್ನು ಅವಶ್ಯ ತಿಳಿಯಬೇಕಾಗಿದೆ. ಸುತ್ತಲೂ ಇರುವ ಪ್ರಕೃತಿ ಸದಾ ಜಾಗ್ರತ, ನಿತ್ಯನೂತನ, ಹೊಸ ಹೊಸ ಚಿಗುರು ಚೆಲುವಿನಿಂದ ಮನಕ್ಕೆ ಮುದ ನೀಡುವ ಬದುಕನ್ನು ಹದಗೊಳಿಸುವ ಕ್ರಿಯೆಯಲ್ಲಿ ಸೊಬಗು, ಸೌಂದರ್ಯ ನಿರ್ಮಿಸುವಲ್ಲಿ ಪ್ರಕೃತಿ ಎಂದೂ ಹಿಂದೆ ಉಳಿಯುವುದಿಲ್ಲ. ಒಂದು ದಿನವೂ ಅದಕ್ಕೆ ವಿಶ್ರಾಂತಿಯೆಂಬುದೇ ಇಲ್ಲ. ಕಾಲ ಕಾಲಕ್ಕೆ ಆಗಬೇಕಾದುದನ್ನು ಮಾಡುತ್ತ ನೀಡುತ್ತ ಇರುವುದು ಅದರ ಜಾಯಮಾನ. ಮಳೆ, ಬಿಸಿಲು, ಛಳಿ ಈ ಋತುಚಕ್ರಗಳಲ್ಲಿರುವ ನಿಯತ ಕ್ರಮಕ್ಕೆ ಎಂದೂ ಚ್ಯುತಿ ಬಂದೇ ಇಲ್ಲ. ಪೃಥ್ವೀ - ಆಪು - ತೇಜ - ವಾಯು - ಆಕಾಶ ಈ ಪಂಚಾಂಗ ತತ್ವಗಳಿಗೆ ಸೃಷ್ಟಿಯ ವಿಕಾಸದಲ್ಲಿ ಅಪಾರ ಆಸಕ್ತಿ. ಆರಾಧಕರಿಗೆ ಅನುಗ್ರಹ ನೀಡುವಲ್ಲಿ ಭೇದ ಭಾವಗಳೇ ಇಲ್ಲ. ವ್ಯಕ್ತಿ ವ್ಯಕ್ತಿಗಳಲ್ಲಿರುವ ವ್ಯತ್ಯಾಸವನ್ನು ಅದು ಸ್ವಲ್ಪವೂ ಗಮನಿಸುವುದೇ ಇಲ್ಲ. ಜಾತಿ ಮತ ಪಂಥಗಳ ದೃಷ್ಟಿಯೂ ಇಲ್ಲ. ಈ ಸೃಷ್ಟಿಯಲ್ಲಿ ಎಲ್ಲರೂ ಸಮಾನರು. "ಸರ್ವೇ ಜನಾಃ ಸುಖಿನೋ ಭವಂತು" ಎಂಬುದೇ ಅದರ ಅಂತರಂಗದ ಅಪೇಕ್ಷೆ.

ಆದರೆ ಇದನ್ನು ನಾವೆಷ್ಟು ಅರಿತಿದ್ದೇವೆ? ಪ್ರಕೃತಿ ಪರಿಸರಗಳ ಆರಾಧನೆ, ಅನುಗ್ರಹಕ್ಕಾಗಿ ನಾವೆಷ್ಟು ಪ್ರಯತ್ನಿಸಿದ್ದೇವೆ? ಒಂದು ಕ್ಷಣವೂ ಅದರ ಸಂಬಂಧದಿಂದ ಬೇರೆಯಾಗಿ ದೂರ ಉಳಿಯಲು ಸಾಧ್ಯವಿಲ್ಲವೆಂದು ತಿಳಿದರೂ ನಮ್ಮ ಸ್ವಾರ್ಥಕ್ಕಾಗಿ ಬೇಕು ಬೇಕಾದಂತೆ ಬಳಸಿ ಅದರ ಮೇಲೆ ಆಕ್ರಮಣ ನಡೆಸುವವರೆಗೂ ಮನಸ್ಸು ಮಾಡಿದ್ದೇವೆಂದರೆ ಜೀವನವನ್ನು ಪ್ರೀತಿಸುವಲ್ಲಿ ನಮ್ಮ ಪಾತ್ರ ಎಷ್ಟು ಎಂಬುದು ವ್ಯಕ್ತವಾಗುತ್ತದೆ. ಇಂಥ ಕೃತ್ಯವನ್ನು ಅದು ಖಂಡಿತ ಕ್ಷಮಿಸುವುದಿಲ್ಲ. ಅದು ಕೋಪಗೊಂಡರೆ ಬದುಕು ಅಸ್ತವ್ಯಸ್ತ. ಪ್ರವಾಹ, ಕ್ಷಾಮ, ಚಂಡ ಮಾರುತ ಏನಾದರೂ ಆದೀತು. ಆದರೆ ಅದು ಪ್ರಕೃತಿಯ ಮುನಿಸು ಎಂದು ನಾವು ಅರ್ಥೈಸಿಕೊಳ್ಳುವುದಿಲ್ಲ. ಮಣ್ಣಿನ ಗುಣಧರ್ಮವನ್ನು ಕಾದುಕೊಳ್ಳುವಲ್ಲಿ ಆಸಕ್ತಿ ವಹಿಸಿ ಕೃಷಿ ಮಾಡಿದರೆ ಸರಿಯಾದ ಫಸಲು ಪಡೆಯುತ್ತೇವೆ. ಅಂದರೆ ಸತ್ವಸಾರಗಳು ಭೂಮಿಯಲ್ಲಿ ಸಂಗ್ರಹವಾಗುವಂತೆ ಮಾಡುವುದು ಮುಖ್ಯ. ಅದರ ಕೊರತೆ ಹೆಚ್ಚಿಸಿದರೆ ಮಣ್ಣಿನ ಮೇಲ್ಪದರು ಹಾಳಾಗಿ ಬಿಡುತ್ತದೆ. ಜಲ ವಾಯುಗಳ ಶುದ್ಧತೆ ಸಮರ್ಪಕ ಬಳಕೆ ಇಲ್ಲದಿದ್ದರೆ ಅವುಗಳ ಮಾಲಿನ್ಯದಿಂದಲೂ ಬದುಕು ಅಪಾಯದ ಅಂಚಿಗೆ ಸಾಗುತ್ತದೆ. ಇಂಥ ಅನೇಕ ವಿಚಾರಗಳಲ್ಲಿ ಈ ಪ್ರಕೃತಿಯ ಸ್ವಭಾವ, ಸಂತೋಷಗಳನ್ನು ಗಣನೆಗೆ ತಂದುಕೊಳ್ಳುವುದೇ ಇಲ್ಲ. ಈ ಪ್ರಕೃತಿ ನೀಡಿದ ಇನ್ನೊಂದು ಕೊಡುಗೆಯೆಂದರೆ ವೃಕ್ಷ ಸಂಪತ್ತು. ಇದು ಸೃಷ್ಟಿಯ ಚೈತನ್ಯವಾಹಿನಿ. ಸದಾ ಸಸ್ಯಶ್ಯಾಮಲೆಯಾದ ಈ ಹಸಿರು ನಮ್ಮ ಉಸಿರಿಗೆ ನಿರಂತರ ಬಲ ಗೆಲುವು ತರುತ್ತದೆ. ನಿಷಿದ್ಧ ವಾಯುವನ್ನು ಹೀರಿಕೊಂಡು ಶುದ್ಧ ವಾಯುವನ್ನು ನೀಡುತ್ತದೆ. ಕೃಷಿಗೆ ಬೇಕಾದ ಗೊಬ್ಬರ, ಗೃಹ ಬಳಕೆಗೆ ಬೇಕಾದ ಕಟ್ಟಿಗೆಗೆ ವೃಕ್ಷಗಳ ಅವಶ್ಯಕತೆ ಹೇಳತೀರದಷ್ಟು. ಇಂಥ ಸ್ಥಿತಿಯಲ್ಲೂ ವೃಕ್ಷಗಳನ್ನು ಕಡಿದು ಭಿಕ್ಷೆ ಬೇಡುವ ಪ್ರಸಂಗವನ್ನು ನಾವೇ ತಂದುಕೊಳ್ಳುತ್ತಿದ್ದೇವೆಯೋ ಅಂತ ಅನ್ನಿಸುತ್ತದೆ. ಹಣ ಸಂಪಾದನೆಗಾಗಿ ಈ ಸಿರಿಗಂಧದ ನಾಡನ್ನು ಬರಡುಗೊಳಿಸುವುದಕ್ಕೂ ಹಿಂಜರಿಯುವುದಿಲ್ಲ ಅಂದರೆ ಪ್ರಕೃತಿ ಮುನಿದುಕೊಳ್ಳದೇ ಇರುತ್ತದೆಯೇ?

ಈ ಪ್ರಕೃತಿ ಪರಿಸರಗಳ ಅಂತರಾಳದ ಉದಾರತೆಯನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು. ಅದು ನಿತ್ಯವೂ ಹೊಸ ಚೆಲುವಿನಿಂದ ಅರಳುತ್ತಲೇ ಇರುತ್ತದೆ. ಇಲ್ಲಿಯೇ ನಾವು ನಮ್ಮ ಸಂಸ್ಕೃತಿಯನ್ನು ಗುರುತಿಸಿ ಅರಗಿಸಿಕೊಳ್ಳಬೇಕು. ಹೊಸ ಚಿಗುರು ಹೊಸ ಹೂವು ನಿತ್ಯ ಹುಟ್ಟಿಕೊಳ್ಳುತ್ತದೆ. ಅದು ಪ್ರಕೃತಿ. ಅದನ್ನು ನೋಡಿ ಸಂತೋಷಿಸುವುದು ಅಥವಾ ಹೂವು ತಂದು ದೇವರ ಅಡಿಗೋ, ಮುಡಿಗೋ ಏರಿಸುವುದು ಸಂಸ್ಕೃತಿ. ಹಾಗೇ ಅವನ್ನು ಹಾಳು ಮಾಡುವುದು ವಿಕೃತಿ. ನೀರು ಭೂಮಿಯಿಂದ ಚಿಮ್ಮಿ - ಉಕ್ಕಿ ಹರಿಯುವುದು ಪ್ರಕೃತಿ. ಅದನ್ನು ಬದುಕು ಬೆಳೆ ಬೇಸಾಯಕ್ಕೆ ಸಮರ್ಪಕ ಬಳಸಿಕೊಳ್ಳುವುದು ಸಂಸ್ಕೃತಿ. ಹಾಗೇ ಅವುಗಳನ್ನು ಮಲಿನಗೊಳಿಸಿ ಬಳಕೆಗೆ ನಿಷಿದ್ಧಗೊಳಿಸುವುದು ವಿಕೃತಿ. ಗಾಳಿ ನಿರಾತಂಕವಾಗಿ ಶುದ್ಧವಾಗಿ ಬೀಸುತ್ತಿರುವುದು ಪ್ರಕೃತಿ. ಅದನ್ನು ಸೇವಿಸಿ, ಆರೋಗ್ಯ ವರ್ಧಿಸಿಕೊಳ್ಳುವುದು ಸಂಸ್ಕೃತಿ. ಅವುಗಳಲ್ಲಿ ವಿಷಾನಿಲ ಬೆರಸಿ ನಿಷಿದ್ಧಗೊಳಿಸುವುದು ವಿಕೃತಿ. ಈ ಬಗೆಯ ಹಲವು ಹತ್ತು ವಿಧದಲ್ಲಿ ಪ್ರಕೃತಿ ಪರಿಸರಗಳ ಪ್ರೇರಣೆಯಲ್ಲಿ ಬದುಕಿನ ಸಾಂತ್ವನ ಚೇತನಗಳನ್ನು ಅನ್ವೇಷಿಸಬೇಕಾಗಿದೆ. ಈ ಕಾರಣದಿಂದಲೇ ಪ್ರಕೃತಿ ಪೂಜೆ ಮೊಟ್ಟ ಮೊದಲು ಆರಂಭಗೊಂಡಿತೆಂದು ಋಗ್ವೇದದಲ್ಲಿ ಹೇಳಲಾಗಿದೆ.

'ಮಧು ವಾತಾಋಯತೇ ಮಧುಕರಂತಿ ಸಿಂಧವಃ' ಎಂಬ ಋಷಿಯ ಅಭೀಪ್ಸೆಯಲ್ಲಿ ಪ್ರಕೃತಿಯು ನಮ್ಮ ಬಗ್ಗೆ ಮೃದು ಮಧುರವಾಗಿರಬೇಕು. ಬೀಸುವ ಗಾಳಿ ಹರಿಯುವ ನದಿ ಆಹಾರವನ್ನೊದಗಿಸುವ ಗಿಡ ಮರ ಬಳ್ಳಿಗಳು ಕಾಲದ ಅರಿವನ್ನುಂಟು ಮಾಡಿ ನಮ್ಮ ಜೀವನವು ಕ್ರಮಬದ್ಧವಾಗಿ ನಿರಾತಂಕವಾಗಿ ಮಾಡುವಂತೆ ಕೇಳುವ ಭಾವನೆ, ಕಾಮನೆ ವ್ಯಕ್ತಗೊಂಡಿದೆ.

ಪ್ರಪಂಚದಲ್ಲಿ ಪ್ರಥಮದ್ದಾಗಿ ಪ್ರಕೃತಿ ಪರಿಸರಗಳ ಆಗಮನ, ನಂತರ ಮನುಕುಲದ ಸರಿಗಮ. ನಮಗಾಗಿಯೇ ಅವು ಮುಂಚಿತವಾಗಿ ಮಿಂಚಿ ಮೈ ತಳೆದು ನಿಂತಿದ್ದು. ಇವೇ ಜೀವ ಜಗತ್ತಿನ ದೇವರು. ಭೂಮಿಯನ್ನೇ 'ಅನೇಕ ರತ್ನ ಸಂಪನ್ನೇ ಭೂಮಿದೇವಿ ನಮೋಸ್ತುತೆ' ಅಂತ ಪ್ರಾರ್ಥಿಸಿ ಅಭಯ ಕೇಳಿದ್ದು ಇದೆ. ನಮ್ಮ ಭವಿಷ್ಯವೆಲ್ಲ ಪ್ರಕೃತಿ ಪರಿಸರಗಳ ಮೇಲೆಯೇ ಅವಲಂಬಿತವಾಗಿದೆ. ಇದನ್ನೇ ಆಧರಿಸಿ ನಮ್ಮ ಪರಂಪರೆ ಸಾಗಿ ಬಂದಿದೆ. ಮುಂದೆಯೂ ಸಾಗಬೇಕಾಗಿದೆ. ಮಾರ್ಕಾಂಡೇಯ ಮಹರ್ಷಿ ಚಿರಂತನ ಕಂಡವನು, ತಿಳಿದವನು. ಆತ ಹೀಗೆ ಹೇಳಿದ್ದಾನೆ".

"ಯಾವದ್ಭೂಮಂಡಲಂ ಧತ್ತೆ ಸಶೈಲವನಕಾನನಂ,
ತಾವತ್ತಿಷ್ಠತಿ ಮೇದಿನ್ಯಾಂ ಸಂತತಿಃ ಪುತ್ರಪೌತ್ರಕೀ"

ಎಲ್ಲಿಯವರೆಗೆ ಈ ಪ್ರಾಕೃತಿಕ ಸಂಪತ್ತು ಸರಿಯಾಗಿ ಸುರಕ್ಷಿತ ವಾಗಿರುತ್ತದೆಯೋ ಅಲ್ಲಿಯವರೆಗೂ ಮನುಕುಲದ ಸಂತತಿ ನಿರಾತಂಕವಾಗಿ ಬದುಕು ಸಾಗಿಸುತ್ತದೆ. ಅಂದಾಗ ಈ ಪ್ರಕೃತಿ ಪರಿಸರಗಳ ಪ್ರಭೆಯಲ್ಲಿ, ಪೋಷಣೆಯಲ್ಲಿ ಜೀವ ಜಗತ್ತಿನ ಪ್ರತಿಷ್ಠಾನ, ಉತ್ಥಾನ ಅಂತರ್ನಿಹಿತವಾಗಿದೆಯೆಂದೇ ತಿಳಿಯಬೇಕು.

*PAGE DONATED BY : **SHRI V. G. BHAT, NIGDI** (DEC.-2014)*

# LETTER FROM SHRI B. N. BHAGWAT

The grand golden jubilee event of the Havyaka Welfare Trust on 14th September was an eye-opener. It had all the ingredients of a professionally organised programme as well as the family touch of our culture. I was pleasantly surprised that even the Havyakas can create a huge noise in response to the drum beater's invitation!

Though I believe in the eventual withering of all castes in the interest of the unity of our religion, I am a proud Havyaka because of the values for which our community is recognised, and the memories of my childhood in the earlier part of the last century and the many summers we spent in our native village Karki. It is the umbilical cord which joins me and many of us to our heritage.

My father N.P. Bhagwat was born in a very poor family (Veene Bhagwats) which could not have afforded to provide for his education without help from relatives and scholarship. Aba-as we called him-used to tell us how he walked barefoot everyday for nearly 25 kilometres to and from Gibbs Highschool in Kumta. He studied in the evenings beside a kerosine lamp and rested only when the lamp was exhausted! With his devotion and hunger for knowledge, he could pursue college education. He was probably the first one in our community to obtain a post-graduate degree( (M.A.) He was offered a job in the nascent Cooperative Department in Poona and was associated with the rapid growth of the cooperative movement in Bombay State and Maharashtra until his retirement in a senior position. With the support of my mother, Radhabai, he not only ensured the education of his brother but also helped needy Havyaka children.

My two brothers,one sister and I used to eagerly look forward to the annual summer vacations during which parents took us to Karki. It was often a two day strenuous journey from Pune. But we enjoyed it and did not mind the long waits for our car or bus to be taken on 'tari' to cross two rivers. The road approaching Karki was itself exciting with the thought of the welcome which we were sure to receive. Though Aba had an ancestral house in Karki we always stayed in the lovely roadside house of our maternal uncle R. M. Hegde who was in revenue department. Ramannamama and his mother showered so much love on us. And then there were all the cousins. The mango trees in the compound fascinated me. All the mangoes were stacked in the top floor room and as I was the favourite of Amma (the women used to be in awe of her) I was occasionally given access to that room. All the cousins played games and pranks on each other.

Sometimes we were allowed to join the favourite card game of elders (munnurnak-304)and wondered why seniors shouted their bids so loudly! I remember fondly our visits to Shivkumar Bhagwat's father and uncles.

We went to different villages like Hongadde, Muroor and others to meet relatives. This is where the values which I mentioned earlier were evident. Shri Hegde from Bangalore also talked about them in our Hayaka function. Hospitality and good manners are inherent in our culture. We were invariably given a warm welcome with 'asari' and even though our plans were not known to them earlier, they would insist that we stay for lunch ( ootaa madlikke beku) This is the base of our tradition and which is further reinforced with moral underpinning and hard work. I am happy that my wife and family follow the same values.

I spent all my student days and 34 years of working life in Maharashtra and Delhi. But that is no excuse. One of my regrets in life is that I never learnt to read and write in Kannada.


## MATRIMONIAL

Alliance invited for a Havyaka Boy, 35 years, 6th ft. height, Vishwamitra Gotra, B.Com in Mumbai University, Diploma in Computers (NIIT) working for a MNC Company (Medical) in Mumbai.

**Contact - 022-28900312**

## YOUR DREAMS COMES TRUE !!!

At **Sirsi - North Kanara,** Residential Camps with world class amenities coming up in the wide area of 30 Acres.

At Campus we will have a Ultra modern amenities like 24 x 7 security with CC TV , wide roads, garden, play ground, community hall, Temple, Club House, Swimming Pool, Medical Center, Guest House, Centralized water system, good drainage system, Power Backup and many more….

This project is handled by enrolled members only. That means land purchasing, development, execution, and maintenance etc done by members only through local experts. [ No Builders / Brokers / Agents are involved in this project ] and actual expenses are equally shared by the members. This works out economical.

Society is already formed and under housing society act registration is in progress.

We have started now Membership enrolment.

Membership is for Our community people only.

***Interested families, pl contact,***

tavarurucampus@hotmail.com

Phone No. 022 21718040 &

Mobile No. 09833910140 / 07303959803


*PAGE DONATED BY : **SMT. MADHU HEGDE,** SANTACRUZ (2013)*

# ಮಾಜಿ ಅಧ್ಯಕ್ಷರಿಗೆ ಸನ್ಮಾನ



ಮಾಜಿ ಅಧ್ಯಕ್ಷರಾದ ಶ್ರೀ ವಿ. ಜಿ. ಭಟ್ಟರನ್ನು ಪುಣೆಯ ಅವರ ಸ್ವಗೃಹದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎನ್. ಆರ್. ಹೆಗಡೆ, ಶ್ರೀ ಸಂಜಯ ಭಟ್ ಹಾಗೂ ಶ್ರೀ ರಮಾಕಾಂತ ಶಾಸ್ತ್ರೀ, ಸುವರ್ಣ ಮಹೋತ್ಸವದ ಸ್ಮರಣಿಕೆಯನ್ನು ನೀಡಿ ಶಾಲು ಹೊದೆಸಿ ಸನ್ಮಾನಿಸಿದರು. ಶ್ರೀ ವಿ. ಜಿ. ಭಟ್ಟರು ಸಂತಸವನ್ನು ವ್ಯಕ್ತಪಡಿಸಿ, ಸಂಸ್ಥೆಗೆ ಶುಭ ಹಾರೈಸಿದರು.



ಮಾಜಿ ಅಧ್ಯಕ್ಷರಾದ ಶ್ರೀ ಎನ್. ಆರ್. ಹೆಗಡೆಯವರನ್ನು ಸಂಸ್ಥೆಯ ಪರವಾಗಿ ಶ್ರೀಮತಿ ಸಾವಿತ್ರಿ ಹಾಗೂ ಶ್ರೀ ಎಸ್. ವಿ. ಶಾಸ್ತ್ರಿ ದಂಪತಿಗಳು ಮಂಡ್ಯಕ್ಕೆ ತೆರಳಿ, ಅಲ್ಲಿ ಹೆಗಡೆಯವರಿಗೆ ಶಾಲು ಹೊದೆಸಿ ಸುವರ್ಣ ಮಹೋತ್ಸವದ ಸ್ಮರಣಿಕೆಯನ್ನು ನೀಡಿ ಸನ್ಮಾನಿಸಿದರು. ಎನ್. ಆರ್. ಹೆಗಡೆಯವರು ಅಪಾರ ಸಂತಸವನ್ನು ವ್ಯಕ್ತಪಡಿಸಿ ಸಂಸ್ಥೆಗೆ ಶುಭ ಹಾರೈಸಿದರು.

## ಬಾಳ ಸಂಜೆ

ಹೇಳದುಳಿದ ಮಾತುಗಳನು
ನುಡಿಯಲೆಂತು ಪ್ರಿಯಸಖಿ
ಸಂಜೆಗೆಂಪು ಸುಳಿಯುತಿಹುದು
ನನ್ನ ಬಾಳ ಬಯಲಲಿ

ಮನದ ತುಂಬ ಅರುಹಲೆಂದು
ಕಾದು ಕುಳಿತ ಕಥೆಗಳು
ತುಟಿಯ ಮೀರಿ ಹೋಗದಂತೆ
ಹೂತು ಹೋದ ವ್ಯಥೆಗಳು

ಬಾಳ ಪಯಣ ದೂರ ಸಾಗಿ
ಮುಂದೆ ಬಂತು ಪಡುವಣ
ಮರೆತುದೆಷ್ಟು ಉಳಿಯಿತೆಷ್ಟು
ಎದೆಯೊಳೇಕೊ ತಲ್ಲಣ

ಬಾಳು ಕಿರಿದು ಸಮಯವಿರದು
ಮನದ ಮಾತನರುಹಲು
ಕಾಲ ಕಳೆದು ಹೋದ ಮೇಲೆ
ಹೇಳಲೇನು ಉಳಿಯದು.

**– ಗೋಪಾಲಕೃಷ್ಣ ಹೆಗಡೆ, ಕೇರಿಮನೆ**


UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*


*PAGE DONATED BY : **SHRI VIVEK BHAGWAT** (2013)*

# ನಾರಾಯಣಿ ಸಿಲ್ಕ್ ಹೌಸ್‌ಗೆ 21ರ ಸಂಭ್ರಮ

## 25% ರಿಂದ 30% ರಿಯಾಯಿತಿ ದರದಲ್ಲಿ ಕಾಂಜೀವರಂ ಸೀರೆಗಳ ಮಾರಾಟವನ್ನು ಬರುವ ಡಿಸೆಂಬರ್ 31ರ ವರೆಗೆ ವಿಸ್ತರಿಸಲಾಗಿದೆ



ಬೆಳಪುಗುತ್ತು ಚಂದ್ರಶೇಖರ ಶೆಟ್ಟಿ

ಮೊ. 9867787712




**1st Floor Showroom At Indraprasth Mall**
Shop No. 128, 129, 130, Nr. Railway Station, Borivali (W)

ನವಗ್ರಹಗಳಲ್ಲಿ ಸರ್ವಶ್ರೇಷ್ಠ ಶುಭಗ್ರಹವಾದ ಗುರುವು ಕಳೆದ ಜೂನ್ ತಿಂಗಳ 19ನೇ ತಾರೀಖಿನಂದು ತಮ್ಮ ಉಚ್ಚ ರಾಶಿಯಾದ ಕರ್ಕಾಟಕವನ್ನು ಪ್ರವೇಶಿಸಿ ನಮ್ಮ ಭಾರತ ದೇಶ ಹಾಗೂ ಪ್ರಜೆಗಳನ್ನು ಅಭಿವೃದ್ಧಿಯ ಉಚ್ಛ್ರಾಯ ಸ್ಥಿತಿಗೆ ಏರಿಸಲು ಅಣಿಯಾಗಿ ನಿಂತಿರುವ ಈ ವಿಜೃಂಭಣೆಯ ಶುಭ ಸಂದರ್ಭದಲ್ಲಿ ನಮ್ಮ ಗ್ರಾಹಕರ ಆನಂದವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ನಮ್ಮ 25%ದಿಂದ 30% 'ರಿಯಾಯಿತಿ'ಯನ್ನು ಡಿಸೆಂಬರ್ 31ರ ವರೆಗೆ ವಿಸ್ತರಿಸಿದ್ದೇವೆ.

## ನಿಮ್ಮೆಲ್ಲರ ಆಗಮನದ ನಿರೀಕ್ಷೆಯಲ್ಲಿವೆ ನಮ್ಮ ಹೊಸ ಹೊಸ ಸೀರೆಗಳ ರಾಶಿ ರಾಶಿ




**2ND FLOOR SHOWROOM AT INDRAPRASTH MALL**
Shop No. B/3 & 4, Nr. Railway Station, Borivali (W)

Advt.

*PAGE DONATED BY : **SMT. GANGA P. BHAGWAT,** PRABHADEVI IN MEMORY OF **LATE SHRI P. R. BHAGWAT** (DEC. 2013)*

# ಸಂಕ್ಷಿಪ್ತ ಸುದ್ದಿಗಳು

## ACHIEVEMENTS



**Kumari Reshma,** d/o. Smt. Veena and Shri Umesh Bhat scored 89.92% in S.S.C. Board Examination held in March 2014.



**Kumari Shraddha,** d/o. Smt. Suchitra and Shri Raghavendra Karnik scored 89.69% in H.S.C. Board Examination held in March 2014.



**Kumari Kausalya Bhat,** d/o. Smt. Shyamala Bhat and Shri Vittal Bhat Secured 88.15% in H.S.C. Examination held in February 2014. She was also awarded for scoring highest marks in Sanskrit and Logic.



**Kumari Akshata Hegde,** d/o. Smt. Suvarna and Shri Umesh S. Hegde secured 78.28% in Final Year B.Com Examination held in March - 2014. Currently she is undergoing Article Traineeship for Chartered Accountant Qualification.



**Kumari Shweta Bhagwat,** daughter of Mr. Prabhat and Mrs. Satyavati Bhagwat, grand daughter of Late Shri G. P. Bhagwat, Nadhcitte, Karki, Honnavar, has completed her Masters in Science (MS) degree from Indian Institute of Science Education and Reasearch (IISER), Pune in the year 2013. Currently she is working towards a doctoral degree in Basic Physics at Syracuse University, Syracuse, New York, USA. Her research topics are gravitational wave astrophysics. Her prior research experiences includes projects at IIFR- Mumbai, IUCAA-Pune, University of Bravnsville, Texas, Albert Einstein Institute of Gravitational wave physics, Hannover, Germany.



**Kavita Hegde,** daughter of Jagadish and Sudha Hegde (Galimane) residing at Thane, has secured 93% in her X CBSE Board Exam-2014.

***We congratulate them and wish them a bright future.***

## ಗಾಯಕಿ ಅಪರ್ಣಾ ಭಟ್‌ರ 'ಮನೆಯೊಳಗಾಡೋ ಗೋವಿಂದ' ಪ್ರಥಮ ಧ್ವನಿಸುರುಳಿ ಬಿಡುಗಡೆ



ನಗರದ ಜನಪ್ರಿಯ ಗಾಯಕಿ ಶ್ರೀಮತಿ ಅಪರ್ಣಾ ಭಟ್ ಅವರ ದಾಸರ ರಚಿತ ಶ್ರೀಕೃಷ್ಣ ಸ್ತುತಿಯ 'ಮನೆಯೊಳಗಾಡೋ ಗೋವಿಂದ' ಆಡಿಯೋ ಸಿಡಿಯನ್ನು ಅಕ್ಟೋಬರ್ 18ರಂದು ಕಾಂದಿವಲಿ ಪಶ್ಚಿಮದ ಕಮಲಾ ವಿಹಾರ್ ಸ್ಪೋರ್ಟ್ಸ್ ಕ್ಲಬ್‌ನ ಬೇಸ್‌ಮೆಂಟ್ ಹಾಲ್‌ನಲ್ಲಿ ಹರಿಕಥಾ ವಿದ್ವಾನ್, ಶ್ರೀಕೃಷ್ಣ -ವಿಠ್ಠಲ ಪ್ರತಿಷ್ಠಾನದ ಸಂಸ್ಥಾಪಕ ಶ್ರೀ ವಿಶ್ವನಾಥ ಭಟ್ ಕೈರಬೆಟ್ಟು ಅವರು ಲೋಕಾರ್ಪಣೆಗೊಳಿಸಿದರು.

ಭಾರತೀಯ ತತ್ವಶಾಸ್ತ್ರದಲ್ಲಿ ಸಂಗೀತ ಶ್ರೇಷ್ಠ. ಎಂತಹ ಸಮಸ್ಯೆಗಳನ್ನು ಕೂಡ ತಿಳಿಗೊಳಿಸುವ ಶಕ್ತಿ ಸಂಗೀತಕ್ಕಿದೆ. ಸಂಗೀತ ಮನುಷ್ಯನನ್ನು ಚಿಂತೆಯಿಂದ ಪ್ರಸನ್ನತೆಯೊಂದಿಗೆ ಕೊಂಡೊಯ್ಯುವ ಶಕ್ತಿಯನ್ನು ಹೊಂದಿದೆ. ನಮ್ಮ ಬದುಕನ್ನು ಹಸನಾಗಿಸಿಕೊಳ್ಳಲು, ಜೀವನದಲ್ಲಿ ಸಂಗೀತವನ್ನು ಅಳವಡಿಸಿಕೊಳ್ಳಬೇಕು ಎಂದು ಧ್ವನಿಸುರುಳಿಯನ್ನು ಲೋಕಾರ್ಪಣೆಗೊಳಿಸಿ ಶ್ರೀ ವಿಶ್ವನಾಥ ಭಟ್‌ರು ನುಡಿದರು. ಕನ್ನಡಿಗರ ಮನೆ-ಮನದೊಳಗೆ ಅಪರ್ಣಾ ಭಟ್‌ರವರ ಸಂಗೀತ ಮಾರ್ದನಿಸಲಿ ಎಂದು ಹಾರೈಸಿದರು.

ಚಾರ್‌ಕೋಪ್ ಕನ್ನಡಿಗರ ಬಳಗದ ಅಧ್ಯಕ್ಷ ಶ್ರೀ ಮಂಜುನಾಥ ಬನ್ನೂರು, ಹವ್ಯಕ ವೆಲ್ಫೇರ್ ಟ್ರಸ್ಟ್‌ನ ಅಧ್ಯಕ್ಷ ಶ್ರೀ ಎನ್.ಆರ್. ಹೆಗಡೆ, ಚಲನಚಿತ್ರ ನಿರ್ದೇಶಕ ಶ್ರೀ ಪಿ.ಎನ್. ರಾಮಚಂದ್ರ, ಕಲಾಸೌರಭದ ಸಂಗೀತ ನಿರ್ದೇಶಕ ಶ್ರೀ ಶೇಖರ ಸಸಿಹಿತ್ಲು ವೇದಿಕೆಯ ಮೇಲೆ ಗೌರವ ಅತಿಥಿಗಳಾಗಿ ಉಪಸ್ಥಿತರಿದ್ದರು.

ಸಭೆಯ ಅಧ್ಯಕ್ಷರಾದ 'ಕರ್ನಾಟಕ ಮಲ್ಲ'ದ ಸಂಪಾದಕ ಶ್ರೀ ಚಂದ್ರಶೇಖರ ಪಾಲೆತ್ತಾಡಿ, ಅಪರ್ಣಾ ಭಟ್‌ರವರ ಧ್ವನಿಸುರುಳಿ ಮನೆ ಒಳಗೆ ಮಾತ್ರವಲ್ಲದೆ ಹೊರಗಡೆಯೂ ಹಾಡುತ್ತಿರಲಿ. ಅವರ ಸಾಧನೆ ಮಹಾರಾಷ್ಟ್ರ ಮಾತ್ರವಲ್ಲದೆ ಕರ್ನಾಟಕದಲ್ಲೂ ಗುರುತಿಸುವಂತಾಗಲಿ ಎಂದರು.

ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಕಲಾಸೌರಭದ ರೂವಾರಿ ಪದ್ಮನಾಭ ಸಸಿಹಿತ್ಲು ಅಪರ್ಣಾ ಭಟ್ ಅವರ ನಿರಂತರ ಸಾಧನೆಯಿಂದ ಈ ಧ್ವನಿ ಸುರುಳಿ ಮೂಡಿಬಂದಿದೆ. ಅವರು ಸಂಗೀತ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆಗೈಯಲಿ ಎಂದು ಹಾರೈಸಿದರು.

ಅಪರ್ಣಾ ಭಟ್ ಅವರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸುತ್ತಾ ತನ್ನ ಪರಿವಾರದವರ ಪ್ರೋತ್ಸಾಹ, ಪರಿಸರದ ಜನರ ಸಹಕಾರ, ಪ್ರೇರಣೆ

*Page Donated by : **Shri Suhas Gunishastri,** Prabhadevi In the memory of his parents **Late Smt. Rajeshwari & Late Shri P. V. Gunishastri** , Past President, H.W.T. (Dec.-2014)*

'Havyaka Sandesha' November 2014

RNI NO. MAHBIL / 2000 / 746,
Postal R.NO. MH/MR/N/161/MBI/2012-2014
WPP License No. MR / Tech / WPP - 130 / North / 2014

Posted at Mumbai Patrika Channel Stg. Office Mumbai-400 001
Date of Publication : 1st of every month
REGISTERED NEWSPAPER
Date of Posting :
2nd, 3rd of every month

If undelivered, please return to :
HAVYAKA WELFARE TRUST
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
E-mail : havyakamumbai@hotmail.com
Visit : www.havyakamumbai.com

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : Smt. Amita S. Bhagwat

To,

ತಾನು ಸಂಗೀತ ಕ್ಷೇತ್ರದಲ್ಲಿ ಯಶಸ್ವಿಯಾಗಿ ಬೆಳೆದು ನಿಲ್ಲಲು ಕಾರಣವಾಯಿತು. ಇಂದು ಎಲ್ಲರ ಸಮ್ಮುಖದಲ್ಲಿ ಧ್ವನಿಸುರುಳಿಯನ್ನು ಲೋಕಾರ್ಪಣೆಗೊಳಿಸಿ, ಪರಿವಾರದವರ ಮುಖದಲ್ಲಿ ಸಂತೋಷವನ್ನು ಕಂಡು ತನ್ನ ಪರಿಶ್ರಮ ಸಾರ್ಥಕವಾಯಿತು ಎಂದು ನುಡಿದರು.

ಪ್ರಾರಂಭದಲ್ಲಿ ಅಪರ್ಣಾ ಭಟ್‌ರ ಶಿಷ್ಯೆಯರು ಪ್ರಾರ್ಥನೆಯನ್ನು ಹಾಡಿದರು. ಪತಿ ಶ್ರೀ ವಿನಯ್ ಭಟ್ ಸ್ವಾಗತಿಸಿದರು.

ಸಿಡಿಯ ಹಾಡುಗಳನ್ನು ಸ್ವತಃ ಅಪರ್ಣಾ ಭಟ್ ಹಾಡಿದರು. ಅಮಿತಾ ಕಲಾಮಂದಿರ ಮೀರಾರೋಡ್‌ನ ಕಲಾವಿದರಿಂದ ಹಾಗೂ ಅಂಕಿತಾ ನಾಯ್ಕ, ಸೌಜನ್ಯಾ ಬಿಲ್ಲವ ಹಾಗೂ ಕುಮಾರಿ ಶರಣ್ಯ ನೃತ್ಯ ಕಾರ್ಯಕ್ರಮವನ್ನು ಸಾದರಪಡಿಸಿದರು. ಶ್ರೀಮತಿ ಶಶಿಕಲಾ ಹೆಗಡೆ ನಿರೂಪಿಸಿದರು. ಚಾರ್‌ಕೋಪ್ ಕನ್ನಡಿಗರ ಬಳಗದ ಕಾರ್ಯದರ್ಶಿ ರಘುನಾಥ ಶೆಟ್ಟಿ ವಂದನಾರ್ಪಣೆ ಮಾಡಿದರು.

## ಮುಂಬಯಿ ಕನ್ನಡ ಸಂಘದ ನೂತನ ಕಾರ್ಯಕಾರಿ ಸಮಿತಿ ಅಧ್ಯಕ್ಷರಾಗಿ ಗುರುರಾಜ್ ಎಸ್. ನಾಯಕ್ ಪುನರಾಯ್ಕೆ

ಮುಂಬಯಿ ಮಾಟುಂಗಾ (ಪೂ) ದ, ಮುಂಬಯಿ ಕನ್ನಡ ಸಂಘದ ವಾರ್ಷಿಕ ಮಹಾಸಭೆಯು ತಾ. 06.09.2014 ರಂದು ಸಂಜೆ, ಸಂಘದ ಕಾರ್ಯಾಲಯದಲ್ಲಿ ಅಧ್ಯಕ್ಷ ಗುರುರಾಜ್ ಎಸ್. ನಾಯಕ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಮಹಾಸಭೆಯಲ್ಲಿ ಕಳೆದ ವಾರ್ಷಿಕ ಮಹಾಸಭೆಯ ವರದಿ 2013 - 14 ನೇ ಸಾಲಿನ ವರ್ಷದ ವರದಿ ಮತ್ತು ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ಅಧ್ಯಕ್ಷರಾಗಿ ಗುರುರಾಜ್ ಎಸ್. ನಾಯಕ್‌ರವರನ್ನು ಪುನರಾಯ್ಕೆ ಮಾಡಲಾಯಿತು. ಇವರು ಸಂಘದಲ್ಲಿ ಕಳೆದ 40 ವರ್ಷಗಳಿಂದ ವಿವಿಧ ಪದಾಧಿಕಾರಿಯಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಸಂಘದ ಅಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ. ಅವರು ಸಂಘದ ಸುವರ್ಣ ಮಹೋತ್ಸವ, ವಜ್ರ ಮಹೋತ್ಸವ ಮತ್ತು ಅಮೃತ ಮಹೋತ್ಸವ ಆಚರಣಾ ಸಮಿತಿಯಲ್ಲಿ ಕೆಲಸ ಮಾಡಿ ಹೆಚ್ಚು ಧನ ಸಂಗ್ರಹ ಮಾಡಿ ಎಲ್ಲರ ಪ್ರೀತಿಗೆ ಪಾತ್ರರಾಗಿರುತ್ತಾರೆ.

ಅದೇ ರೀತಿ ನುರಿತ ಅನುಭವವಿರುವ ಡಾ. ಎಸ್. ಕೆ. ಭವಾನಿ ಯವರನ್ನು ಉಪಾಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.

ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಸಮಾಜ ಸೇವಕ ಶ್ರೀ ಸತೀಶ್ ಎನ್. ಬಂಗೇರ ಇವರನ್ನು ನೇಮಕ ಮಾಡಲಾಯಿತು.

ಈ ಹಿಂದೆ ಸಮಿತಿಯಲ್ಲಿ ಕೆಲಸ ಮಾಡಿ ಅನುಭವವಿರುವ ಸೋಮನಾಥ ಕರ್ಕೇರರವರನ್ನು ಗೌರವ ಜೊತೆ ಕಾರ್ಯದರ್ಶಿಯಾಗಿ, ಶ್ರೀ ರಾಜೇಂದ್ರ ಆರ್. ಗಡಿಯಾರ್‌ರವರನ್ನು ಗೌ. ಕೋಶಾಧಿಕಾರಿಯಾಗಿ ಪುನರಾಯ್ಕೆ ಮಾಡಲಾಯಿತು. ಗೌರವ ಪುಸ್ತಕ ಭಂಡಾರದ ಅಧಿಕಾರಿಯಾಗಿ ಶ್ರೀ ಎಸ್. ಕೆ. ಪದ್ಮನಾಭರವರನ್ನು, ಗ್ರಂಥಾಲಯ ಸಮಿತಿಯ ಕಾರ್ಯಾಧ್ಯಕ್ಷೆಯಾಗಿ ಶ್ರೀಮತಿ ಸಂಧ್ಯಾ ಎ. ಪ್ರಭುರವರನ್ನು ನೇಮಿಸಲಾಯಿತು. ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆಯಾಗಿ ಶ್ರೀಮತಿ ರಜನಿ ವಿ. ಪೈ, ಕಾರ್ಯದರ್ಶಿಯಾಗಿ ಸುಗುಣಾ ವಿ. ಶೆಟ್ಟಿಯವರನ್ನು, ಉಪಾಧ್ಯಕ್ಷೆಯಾಗಿ ಶ್ರೀಮತಿ ಲಕ್ಷ್ಮೀ ಸುಧೀಂದ್ರರವರನ್ನು ನೇಮಿಸಲಾಯಿತು.

## ಜಿ. ಜಿ. ಹೆಗಡೆ ಬಾಳಗೋಡರಿಗೆ ರಾಷ್ಟ್ರ ಪ್ರಶಸ್ತಿ

ಸಿದ್ಧಾಪುರ ತಾಲೂಕು (ಶಿರಸಿ ಶೈಕ್ಷಣಿಕ ಜಿಲ್ಲೆ) ಕಾವಂಚೂರ ಮಲೆನಾಡ ಪ್ರೌಢ ಶಾಲೆಯಲ್ಲಿ 33 ವರುಷಗಳ ಕಾಲ ಶಿಕ್ಷಕರಾಗಿ, ಮುಖ್ಯಾಧ್ಯಾಪಕರಾಗಿ, ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಂಡಿದ್ದ ಜಿ. ಜಿ. ಹೆಗಡೆ ಬಾಳಗೋಡ ಅವರಿಗೆ 2013 ರ ಶಿಕ್ಷಕ ರಾಷ್ಟ್ರ ಪ್ರಶಸ್ತಿಯು ದಿ. 05.09.2014 ರಂದು (ಶಿಕ್ಷಕರ ದಿನೋತ್ಸವ) ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತದ ರಾಷ್ಟ್ರಪತಿ, ಪ್ರಣಬ್ ಮುಖರ್ಜಿ ಅವರು ನೀಡಿದರು. ಈ ಸಂದರ್ಭದಲ್ಲಿ ಮಾನವ ಸಂಪನ್ಮೂಲ ಸಚಿವೆ ಸ್ಮೃತಿ ಇರಾನಿ ಉಪಸ್ಥಿತರಿದ್ದರು.

ಜಿ. ಜಿ. ಹೆಗಡೆ ಬಾಳಗೋಡ ಅವರು ಶಿಕ್ಷಕರಾಗಿ ಕಲೆ ಸಾಹಿತ್ಯ ಪತ್ರಿಕಾ ರಂಗ, ಸ್ಕೌಟ್, ಭಾರತ ಸೇವಾ ದಳ ರೆಡ್ ಕ್ರಾಸ್, ಹಿಂದೀ ಪ್ರಚಾರ, ಕನ್ನಡ ಸಾಹಿತ್ಯ ಪರಿಷತ್ತು ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆ, ಕೇಂದ್ರ ವಯಸ್ಕರ ಶಿಕ್ಷಣ ಮಂಡಳಿ ಮುಂತಾದ ಕ್ಷೇತ್ರಗಳಲ್ಲಿ ತೊಡಗಿಕೊಂಡಿದ್ದರು. ಅವರಿಗೆ ವಿಶೇಷ ರಾಷ್ಟ್ರ ಶಿಕ್ಷಕ ಪ್ರಶಸ್ತಿ ಪ್ರದಾನವಾಗಿದೆ.

*PAGE DONATED BY : **SMT. TRIVENI BHATSHIKAR & SHRI R. T. BHATSHIKAR**, GHATKOPAR IN THE MEMORY OF **LATE SHRI T. R. BHATSHIKAR** (DEC.-2014)*